(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ವಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ)

ಅಭಿಯಾಚನೆ ಕ್ರಮಾಂಕ-೫-ಉದ್ಯಮಗಳು (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು)

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೨ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಉದ್ಯಮಗಳಿಗೆ (ಚಿಕ್ಕಪುಟ್ಟ ಉದ್ಯಮಗಳು ಮತ್ತು ರೇಷ್ಮೆ ವ್ಯವಸಾಯದ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೩೮,೪೪,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೦,೭೭,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ವಂಜೂರ್ಮಾಡುವುದು.

ಅಭಿಯಾಚನೆ ಕ್ರಮಾಂಕ-೭-ಚಿಕ್ಕಪುಟ್ಟ ಉದ್ಯಮಗಳು

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೨ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಚಿಕ್ಕಪುಟ್ಟ ಉದ್ಯಮಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೨, ೫೪, ೩೫೦೦೨ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೨ ೭೫ ೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ವಂಜೂರ್ಮಾಡುವುದು.

ಅಭಿಯಾಚನೆ ಕ್ರಮಾಂಕ ೮-ರೇಷ್ಮೆ ವ್ಯವಸಾಯ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೨ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇಷ್ಮೆ ವ್ಯವಸಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೦ ೦೫ ೭೦ ೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೭೦೧ ೧೦೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ವಂಜೂರ್ಮಾಡುವುದು.

ಚುಕ್ಕೆಗುರುತಿನ ಪ್ರಶ್ನೆಗಳಿಗೆ ಬಾಯಿಮಾತಿನ ಮೂಲಕ ನೀಡಲಾದ ಉತ್ತರಗಳು ಸಾರಾಯಿ ಹಾಗೂ ಸೇಂದಿ ಗುತ್ತಿಗೆದಾರರಿಂದ ಬರಬೇಕಾದ ಬಾಕಿ

೧೩೧೦ ಶ್ರೀ ಕೆ.ಬಿ. ಶಾಣಪ್ಪ (ಪಹಬಾದ್)—ಮಾನ್ಯ ಅಬ್ಕಾರಿ ರಾಜ್ಯ ಸಚಿವರು ಈ ವಿಷಯವನ್ನು ದಯವಿಟ್ಟು ತಿಳಿಸುವರೇ.

(ಅ) ೧೯೮೪-೮೫ರಲ್ಲಿ ಸರ್ಕಾರಕ್ಕೆ ಎಷ್ಟು ಹಣ ಬಾಡಿಗೆ ರೂಪದಲ್ಲಿ ಸಾರಾಯಿ ಮತ್ತು ಶೇಂದಿಯಿಂದ ಬರಬೇಕಾಗಿತ್ತು,

(ಆ) ಇದನ್ನು ಪಾವತಿ ಮಾಡಿರುವ ಗುತ್ತೇದಾರರ ಸಂಖ್ಯೆ ಎಷ್ಟು ಹಾಗೂ ಪಾವತಿ ಮಾಡದೆ ಇರುವ ಗುತ್ತೇದಾರರ ಹೆಸರುಗಳನ್ನು (ಜಿಲ್ಲಾವಾರು ಸೇಂದಿಗಾಗಿ ಮತ್ತು ತಾಲ್ಲೂಕುವಾರು ಸಾರಾಯಿಗಾಗಿ ಕೊಡುವುದು)

(ಇ) ಈ ಹಣ ಪಾವತಿ ಮಾಡದೆ ಇರುವ ಗುತ್ತೇದಾರರ ಮೇಲೆ ಯಾವ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

(ಈ) ಗುಲ್ಬರ್ಗದಲ್ಲಿ ೧೯೮೫-೮೬ರ ಸಾಲಿನ ಹಣ ಪಾವತಿ ಮಾಡಿಲ್ಲದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ, ಹಾಗಿದ್ದಲ್ಲಿ ಇಂಥವರ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು.

ಶ್ರೀ ರಮೇಶ್ ಎ. ಜಿಗಜಿಣಗಿ (ಅಬ್ಕಾರಿ ರಾಜ್ಯ ಸಚಿವರು).—

ಅ) ತೇಂದಿ ಗುತ್ತಿಗೆಯಿಂದ ೪೫.೬೪ ಕೋಟಿ ರೂಗಳು

ಸಾರಾಯಿ ಗುತ್ತಿಗೆಯಿಂದ ೧೦೨.೩೯ ಕೋಟಿ ರೂಗಳು.

ಆ) ಪೂರ್ತಿಯಾಗಿ ಪಾವತಿ ಮಾಡಿರುವ ಗುತ್ತಿಗೆದಾರರು ೫೨

ಪೂರ್ತಿಯಾಗಿ ಪಾವತಿ ಮಾಡದೆ ಇರುವ ಗುತ್ತಿಗೆದಾರರ ವಿವರಗಳನ್ನು ಅನುಬಂಧ–೧ರಲ್ಲಿ ಕೊಡಲಾಗಿದೆ.

ಇ) ಅಬಕಾರಿ ಮತ್ತು ಕಂದಾಯ ಕಾಯಿದೆ ವೇರೆಗೆ ಅಬ್ಕಾರಿ ಬಾಕಿಯನ್ನು ವಸೂಲು ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಈ) ಬಂದಿದೆ. ಅಬ್ಕಾರಿ ಮತ್ತು ಕಂದಾಯ ಕಾಯಿದೆ ವೇರೆಗೆ ಬಾಕಿ ಗುತ್ತಿಗೆ ಹಣವನ್ನು ವಸೂಲುಮಾಡಲು ಕ್ರಮಕೈಗೊಳ್ಳಲಾಗಿದೆ.

Annexure—I

Sl. No.	Name of the Districts/Taluks	Name of the Contractor	Kind of lease
1	2	3	4
1	Bangalore District	M/s. H. Dasappa & Sons, No. 421, 3rd Cross, Wilson Garden, Bangalore	Toddy
	1 Devanahalli Taluk	H. R. Gurappa, No. 381, Kilari Road, Bangalore-50	Arrack
	2 Anekal Taluk 3 Kanakapura 4 Ramanagaram 5 Channapatna 6 Magadi 7 Doddaballapura	M/s. H. Dasappa & Sons, No. 421, 3rd Cross, Wilson Garden, Bangalore.	do
2	Belgaum District		
	1 Belgaum Taluk	Sri K. G. Balakrishna, Gandhinagar, Mangalore	do
	2 Bylahongal	Sri H. R. Krishnamurthy, Excise Contractor, Bylahongal	do
	3 Parasgad Taluk	M/s. V. S. Hosali & Co., Excise Contractor, Soundatti	do
	4 Raibag Taluk	Sri K. Satyanarayana, C/o Sri K. Bichaiah CL. 1 licencee, Bagalkot.	do
	5 Chikodi Taluk	Sri M. Guruswamy, Parvathinagar, Bellary	do

1	2	3	
	6 Athani Taluk	M/s. Sathyam Enterprises, No. 7/D 18th Gandhinagar, Bellary	do
3	Bellary District	M/s. Raidurga & Co., Hosamane Extn. Shimoga	Toddy
	1 Bellary Taluk	M/s. Ragavendraswamy & Co., Yellareddy Taluk. Nizamabad Dist, Andhara Pradesh.	Arrack
	2 Harapanahalli Hadagali	M/s. H. Dagappa & Sons, No. 421, 3rd Cross, Wilson Garden, Bangalore	do
4	Bijapur District	M/s, Raghavendraswamy & Co, Yellareddy Taluk, Nizamabad District (A. P)	Toddy
	1 Bijapur Taluk 2 Mudhol 3 Bilagi	Sri M. J. Torgal S/o Jampanna Targal Bijapur	Arrack
	4 Basavana Bagewadi	M/s. Dhattatreya Trading Co., Jamkhandi	do
	5 Hungund Taluk	Sri R. Rajeswaragowda, Joshi Galli, Ilkal Hungund Taluk	do
	6 Muddebihal	Sri L. K. Karadi, Jayachamaraja Nagar,	do
	7 Badami	Hubli	
5	Chitradurga District	Sri K. C. Nagendrappa, Mallalkeri, Davanagere Taluk.	Toddy
	1 Davanagere Taluk	Sri Bangle Namadeva Rao P. B. No. 20, Harihar	Arrack
	2 Molakalmuru Taluk	Sri P. Kalyanappa, Arrack Contractor, Molakalmuru Taluk	do
	3 Jagalur Taluk	Dr. Girajapathy, Lakshmipura, Arasikere Taluk, Hassan District.	do

4	Hosadurga Taluk	Sri S. T. Anjanappa, Excise Contractor, J. C. R. Extension, Chitradurga	do
5	Chitradurga	M/s. H. Dasappa & Sons, No. 421, 3rd Cross, Wilson Garden, Bangalore	Arrack
6	Harihara		
7	Holalkere		
8	Hiriyur		
6	Chickmagalaur District	Sai C. G. Rajappa, S/o Gantigowda, Excise Contractor, Ranucamba Road, Channarayapatna Taluk, Hassan District	Toddy
1	Chickmagalur Taluk	M/s. Dasappa & Sons, No. 421. Bangalore	Arrack
2	Mudigere Taluk	Sri M. Chanappa, S/o Subba Hegde. c/o M. B. Dyavegowda. Excise Contr. Hand Post, Mudigere taluk	do
3	Sringeri Taluk	M/s Sathieshchandra & Co, Excise Contr. Sribedu Udupi, D. K. District.	do
7	Dharwad District	Sri K. V. Prabhakar, Sri Gangadhareshwara Nilaya, B. M. Road, Hassan	Toddy
1	Ron Taluk	Sri Y. M. Kambli, Nargund, Dharwad Dist.	Arrack
2	Mundargi	Sri D. R. Darmayat, R/o. Ron,	do
3	Kundagol	Sri P. C. Rayabagi, New Cotton Market, Hubli	do
4	Savanur Taluk	Sri L. K Karadi, J. C. Nagar, Hubli	do
5	Shiggaon	M/s. Dasappa & Sons, Bangalore	do
6	Byadagi		
7	Hirekerur		

1	2	3	4
8	Navalgund Taluk	Sri S. G. Kalyan, Karnataka Engineering works, Old Hubli, Hubli.	do
9	Hubli	M/s. Sathishchandra & Co., Samudrathirtha Road, Udupi	do
10	Dharwad		
11	Hangal		
12	Haveri	Sri P. V. Ramana, Gopty, Ananthapur (A.P).	Arrack
13	Ranebennur Taluk		
8	Dakshina Kannada Dist.		
1	Mangalore	Sri A. J. Shetty & Co, Excise Contractors Balamatta Road, Mangalore	do
2	Bantwal		
3	Puttur		
4	Sullia Taluk	Sri Keshavaswamy, S/o Narayana Swamy, Prop Hotel Pallavi. Chickmagalur	do
5	Karkala Taluk	Sri K. Prakash Kamath, S/o Sadananda Kamath Excise Contractors Ashoka Nivas, Market Road, Karkala	do
6	Udupi Taluk	Sri A. Venugopal, S/o Thimappa, Red Buildings Kankaddy. Mangalore	do
7	Kundapura	M/s. Sathischandra & Co., Udupi	do
8	Belthangady		
9	Gulbarga District	Sri K. Lakshman Rao s/o Rajeshwara Rao, R/o Gupta, Nizamabad (A. P).	Toddy
10	Hassan District	Sri J. Sudhakar, Door No. 29, Bandigowda Layout, Mandya	do
1	Sakaleshpura	M/s R. Dasappa & Sons Bangalore	Arrack
2	Belur Taluk		
3	Arasikere Taluk	M/s. Tirumala Traders, Channarayapatna Town, Hassan Dist.	do

4	Channarayapatna Tq.	Sri C. V. Rangagowda s/o Obegowda, Renukamba St., C. R. Patna Town	do
5	Holenarasipura Tq.	Sri T. Mallesh & Co, Excise Contractor, Holenarasepura Town,	do
6	Arakalgud Taluk	Sri P. S. Siddarthan, Excise Contractor, Arakalgudu.	Arrach
7	Alur Taluk	Sri H. Ramaiah, Excise Contractor, Tilak Nagar Mysore	do
11	Kodagu District		
1	Madikeri Taluk	Sri K. V. Kamath, s/o Thamas, Stivert Hill Fange, Madekeri.	Arrack
2	Somwarpet Taluk	Sri T. John. Arrack Contractor, School Road, Madikeri	do
3	Virajpet	Sri Joseph Michael C/o. Joseph Michaela & Bros. Mannarkuttu House, Kaup. House, Palai, Kottayam Dist. Kerala State	do
12	Kolar District		
1	Kolar Taluk	M/s. Srinivasa Enterprises, No. 421, 3rd Cross Wilson Garden, Bangalore-1	do
2	Malur	M/s. H. Dasappa & Sons. Bangalore	do
3	Siddlaghatta		
4	Chinthamani	Sri J. V. Narayana Swamy, K. R. Entn., Chinthamani	do
5	Bangarpet	Sri H. C. Papanna, No. 650, Cinema Road, D. D. Pur	do
6	Mulbagal Taluk	Sri H. P. Prasannakumar, No. 650, Cinema Rood. D. D. Pur	do
7	Srinivasapur	Sri Y. S. Vasu, S/o Y. Dasanna, No. 26, M. G. Road, Chinthamani	do

1	2	3	4
13	Mandya District	M/s. Tirumala Traders, Excise Contractor C. R. Patna, Hassan Dist.	Toddy
	1 Malavalli	M/s. H. Dasappa & Sons, Bangalore	do
	2 Srirangapatna		
	3 Pandavapura		
	4 Nagamangala Taluk	Sri Narasegowda, S/o. Chandragupta yellagowda, Excise Contractor. Nagamangala Town.	do
	5 K. R. Pet	Sri K. V. Rangegowda, s/o Sri J. Obegowda, Excise Contractor, C. R. Patna	do
14	Mysore District	Sri K. V. Prabhaker c/o S. B, Gowdaiah, B. M. Road, Hassan	Toddy
	1 Mysore	M/s. H. Dasappa & Sons, Bangalore	Arrack
	2 Kollegal		
	3 T. N. Pura		
	4 Yelandur		
	5 Nanjangud		
15	Raichur District	M/s. Renuka Sri & Co., Excise Contractor, Station Road, Raichur	Toddy
	1 Koppal Taluk	Sri S. G. Kalyani, Karnataka Engineering Works, Old Hubli, Dharwad District.	Arrack
	2 Gangabathi	Sri H. R. Srinath, Saroj Nivas, Vidyaranya Road, Gangavati, Raichur District	do
16	Shimoga District	M/s. H. Dasappa & Sons, Bangalore	Toddy
	1 Honnali Taluk	do	Arrach
	2 Shimoga	Sri P. K. Shankaranarayana, Puvathom Kadavad House Trichur, Kerala State	do
	3 Bhadravathi		
	4 Channagiri Taluk	Sri B. Vijayabarathi, Raidurga (A.P).	do

5	Shikaripura Taluk	Sri B. S. Srinivas, Nedarkeri, Shikaripura,	do
6	Soraba Taluk	M/s. Satischandra & Co, Udupi	do
7	Thirthahalli Taluk	Sri H. Ebranim, Near Koti Anjaneya Temple Shimoga	do
17	Tumkur District	Sri Hersha Kanekal, Railway Station Road, Tumkur	Toddy
1	Tumkur Taluk	Sri M. Basavaraju, s/o Malleshappa, Gandhi Nagar, Bellary.	Arrack
2	C. N. Halli	Sri Narasegowda, s/o ChandarguptaYellagowda,	do
3	Tiptur	Excise Contractor, Nagamangala	
4	Turuvekere Taluk	Sri Nanjegowda, s/o Oblegowda, Mugahur, Turuvekere taluk	do
18	Uttara Kannada District		
1	Honnavara	M/s. Satischandra & Co, Excise Contractor. V. S. T. Road, Udupi	Toddy
2	Kumta		
3	Ankola	do	
4	Kumta		
4	Honnavara		
5	Siddapur		
6	Mundgod		
7	Bhatkal		
8	Sirsi		
9	Haliyal		
10	Yellapur		
11	Kaiwar		
11	Supa		

ಶ್ರೀ ಕೆ. ಬಿ. ಶಾಣಪ್ಪ.—೧೯೮೪-೮೫ರಲ್ಲಿ ಬರಬೇಕಾದ ಬಾಡಿಗೆ ಎಷ್ಟು ಎಂದು ಕೇಳಿದರೆ ನೀವು ಗಂತ್ತಿಗೆಯಿಂದ ಬರಬೇಕಾದುದನ್ನು ಹೇಳಿದ್ದೀರಿ. ಗುತ್ತೇದಾರರಿಂದ ಬರಬೇಕಾದ ಹಣ ಎಷ್ಟು ಎಂದರೆ ಎಷ್ಟು ಮಂದಿಯಿಂದ ಹಣ ಬರಬೇಕಾಗಿದೆ ಎಂದು ಹೇಳಿದ್ದೀರಿ. ೮೪-೮೫ರಲ್ಲಿ ಯಾರ್ಯಾರಿಂದ ಎಷ್ಟೆಷ್ಟು ಹಣ ಬರಬೇಕೆಂದು ಕೇಳುತ್ತೇನೆ.

ಶ್ರೀ ರಮೇಶ ಜಗಜಿಣಗಿ.—೧೯೮೪-೮೫ರಲ್ಲಿ ೧೯ ಕೋಟಿ ರೂಪಾಯಿಂಗಳಷ್ಟು ಬಾಕಿ ಬರಬೇಕು. ಅದರಲ್ಲಿ ೯.೧೧ ಕೋಟಿ ರೂಪಾಯಿಗೆ ಕೋರ್ಟಿನಿಂದ ತಡೆಯಾಜ್ಞೆಯಾಗಿದೆ. ೨ ಕೋಟಿ ರೂಪಾಯಿ ಬ್ಯಾಂಕ್ ಗ್ಯಾರಂಟಿಯಲ್ಲಿ ತೊಡಗಿದೆ. ೨೧ ಲಕ್ಷ ರೂಪಾಯಿ ರೆವಿನ್ಯೂ ಡಿಪಾಸಿಟ್‌ನಲ್ಲಿದೆ. ೨ ಕೋಟಿ ರೂಪಾಯಿ ಹೆಚ್. ದಾಸಪ್ಪ ಮತ್ತು ಕಂಪನಿಯಿಂದ ಬರಬೇಕಾಗಿದೆ, ಸಿಂಧ್ಯರಿಂದ ೨.೧೨ ಕೋಟಿ, ಎಸ್. ಬಿ. ಗೌಡಯ್ಯನಿಂದ ೨.೦೫ ಕೋಟಿ ಸಿ.ವಿ. ರಾಜಪ್ಪನಿಂದ ೦.೭೧ ಲಕ್ಷ, ಲಕ್ಷ್ಮಣರಾವ್‌ನಿಂದ ೧ ಕೋಟಿ ೮ಲಕ್ಷ ರಾಜಪಲ್ಲಯ್ಯನಿಂದ ೫೭ಲಕ್ಷ, ಶೆಟ್ಟಿಯಿಂದ ೨೭ ಲಕ್ಷ, ನಾಗರಾಜ್‌ನಿಂದ ೨೭ ಲಕ್ಷ ದುರ್ಗ ಮತ್ತು ಕಂಪನಿಯಿಂದ ೧೮ ಲಕ್ಷ ರೂಪಾಯಿ ಬರಬೇಕಾಗಿದೆ. ಯಾವ ಯಾವ ಕಂಟ್ರಾಕ್ಟರಂಗಳು ಎಷ್ಟೆಷ್ಟು ಹಣ ವನ್ನು ಕೊಡಬೇಕೆಂಬ ಪಟ್ಟಿಯನ್ನು ಕೊಡಬೇಕೆಂದು ಕೇಳಿದ್ದಾರೆ. ಆ ಪಟ್ಟಿಯನ್ನು ನಾಳೆ ಕಳುಹಿಸಿ ಕೊಡುತ್ತೇನೆ.

ಶ್ರೀ ವಿ.ರಂಗದೇವರಾಯಲು.—(ಸದಸ್ಯರು ಹಾಜರಿರಲಿಲ್ಲ)

ಶಿವಸಮುದ್ರಂ ಜಲವಿದ್ಯುತ್ ಕೇಂದ್ರದಲ್ಲಿ ಉತ್ಪಾದನೆಯಾಗುವ ವಿದ್ಯುಚ್ಛಕ್ತಿ ಬಗ್ಗೆ

೧೮೫೫. ಶ್ರೀ ಎಸ್. ಎಂ. ಅಡ್ಯಂತಾಯ (ಸುರತ್ಕಲ್).—ಮಾನ್ಯ ವಿದ್ಯುಚ್ಛಕ್ತಿ ಗಣಿ ಹಾಗೂ ಭೂ ವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಶಿವಸಮುದ್ರಂ ಜಲವಿದ್ಯುತ್ ಕೇಂದ್ರದಲ್ಲಿ ಉತ್ಪಾದನೆಯಾಗುವ ವಿದ್ಯುಚ್ಛಕ್ತಿ ಪ್ರಮಾಣ ವೆಷ್ಟು ?

ಆ) ಇದಕ್ಕಾಗಿ ತಗಲುವ ವೆಚ್ಚ ಮತ್ತು ಬರುವ ಆದಾಯ ಎಷ್ಟು ?

ಇ) ಶಿವಸಮುದ್ರಂ ಜಲ ವಿದ್ಯುತ್ ಕೇಂದ್ರದಿಂದ ಕೋಲಾರದ ಭಾರತ್ ಗೋಲ್ಡ್ ಮೈನ್ಸ್ ಲಿಮಿಟೆಡ್ ಸಂಸ್ಥೆಗೆ ವಿದ್ಯುತ್ ಪೂರೈಕೆಯನ್ನು ನಿಲ್ಲಿಸಲಾಗುವುದು ನಿಜವೇ, ಹಾಗಿದ್ದಲ್ಲಿ ಇದರಿಂದ ೧೬,೦೦೦ ಕಾರ್ಮಿಕರು ಹಾಗೂ ಕಾರ್ಮಿಕ ಕುಟುಂಬದವರು ತೊಂದರೆ ಗೀಡಾಗುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಈ) ಶಿವಸಮುದ್ರಂ ಜಲವಿದ್ಯುತ್ ಕೇಂದ್ರವನ್ನು ಮುಚ್ಚುವ ತೀರ್ಮಾನವನ್ನು ಸರ್ಕಾರದವರು ಕೈಗೊಂಡಿರುವುದು ನಿಜವೆ ?

ಶ್ರೀ ಜೆ. ಎಸ್. ದೇಶಮುಖ್ (ವಿದ್ಯುತ್ ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು).—

ಅ) ಶಿವಸಮುದ್ರಂ ಜಲವಿದ್ಯುತ್ ಕೇಂದ್ರದಲ್ಲಿ ದಿನವಹಿ ಉತ್ಪಾದನೆಯಾಗುವ ವಿದ್ಯುಚ್ಛಕ್ತಿಯ ಪ್ರಮಾಣ ಸರಾಸರಿ ೦.೩೮ ದಶಲಕ್ಷ ಯೂನಿಟ್ಟುಗಳು.

ಆ) ಇಲ್ಲಿ ಒಂದು ಯೂನಿಟ್ಟು ವಿದ್ಯುಚ್ಛಕ್ತಿ ಉತ್ಪಾದನೆಗೆ ತಗಲುವ ವೆಚ್ಚ ಹಾಲಿ ಸಮಾರು ೦೨.೯೬ ಪೈಸೆ. ಮಂಡಳಿಗೆ ಒಂದು ಯೂನಿಟ್ಟಿಂದ ಹಾಲಿ ಬರುತ್ತಿರುವ ಆದಾಯ ೫೪.೬೪ ಪೈಸೆ.

ಇ) ಶಿವಸಮುದ್ರಂ ಘಟಕದಲ್ಲಿರುವ ಯಂತ್ರೋಪಕರಣಗಳು ಈಗಾಗಲೇ ಐವತ್ತು ವರ್ಷಕ್ಕಿಂತಲೂ ಮೇಲ್ಪಟ್ಟು ದೀರ್ಘಾವಧಿ ಕಾಲ ಸೇವೆ ಸಲ್ಲಿಸಿ ಹಳೆಯದಾಗಿವೆ. ಮೇಲಾಗಿ ಇವು ಇಪ್ಪತ್ತೈದು ಸೈಕಲ್ ವಿದ್ಯುತ್ತನ್ನು ಉತ್ಪಾದಿಸುವ ಯಂತ್ರಗಳು. ಈಗ ಹಾಲಿ ಎಲ್ಲೆಡೆಗಳಲ್ಲೂ ಐವತ್ತು ಸೈಕಲ್ ವಿದ್ಯುತ್ ಬಳಕೆಯಲ್ಲಿದ್ದು ಈ ವಯಸ್ಸಾದ ಯಂತ್ರಗಳನ್ನು ದೀರ್ಘಾವಧಿ ಕಾಲ ಮುಂದೆ ನಡೆಸುವುದು ಶಕ್ಯವಲ್ಲ.